ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

**MD RGRHCL 01 GEN 38 2002 / 5104** **Date: 11.09.2008**

**ಸುತ್ತೋಲೆ**

**ಪ್ರಾಮುಖ್ಯ**

ವಿಷಯ : ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಹಾಗೂ ಇತರೆ ವಸತಿ ಯೋಜನೆಗಳಡಿಯಲ್ಲಿ ಆಯ್ಕೆಯಾದ ಅರ್ಹ ಫಲಾನುಭವಿಗಳು ವಸತಿ ಸೌಕರ್ಯ ಪಡೆಯುವ ಮುನ್ನ ಅಥವಾ ಪಡೆದ ನಂತರ ಮೃತಪಟ್ಟಲ್ಲಿ ಮನೆಯನ್ನು ಅವರ ನೇರ ವಾರಸುದಾರ ಹೆಸರಿಗೆ ಬದಲಾವಣೆ ಬಗ್ಗೆ.

* * * * *

ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳಡಿಯಲ್ಲಿ ನಿಯಮಾನುಸಾರ ಆಯ್ಕೆಯಾಗಿ ವಸತಿ ಸೌಕರ್ಯ ಪಡೆಯುವ ಮುನ್ನ ಫಲಾನುಭವಿಗಳು ಮರಣ ಹೊಂದಿದ್ದಲ್ಲಿ ಅಥವಾ ವಸತಿ ಸೌಕರ್ಯ ಪಡೆದ ನಂತರ ಫಲಾನುಭವಿಗಳು ಮರಣ ಹೊಂದಿದ್ದಲ್ಲಿ ಮನೆಯನ್ನು ಸದರಿ ಫಲಾನುಭವಿಗೆ ಸಂಬಂಧಿಸಿದ ನೇರ ವಾರಸುದಾರರ ಹೆಸರಿಗೆ ಬದಲಾವಣೆ ಮಾಡಲು ಸೂಕ್ತ ದಾಖಲೆಗಳೊಂದಿಗೆ ನಿಗಮಕ್ಕೆ ಕಳುಹಿಸಿದ ನಂತರ ನಿಗಮದಿಂದ ಪರಿಶೀಲಿಸಿ ಅನುಮೋದನೆ ನೀಡಲಾಗುತ್ತಿದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇನ್ನು ಮುಂದೆ ಈ ಕೆಳಗಿನಂತೆ ಕ್ರಮ ವಹಿಸಲು ತಿಳಿಸಲಾಗಿದೆ.

ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ವಸತಿ ಯೋಜನೆಗಳಡಿಯಲ್ಲಿ ನಿಯಮಾನುಸಾರ ಆಯ್ಕೆಯಾಗಿ ವಸತಿ ಸೌಕರ್ಯ ಪಡೆಯುವ ಮುನ್ನ ಫಲಾನುಭವಿಗಳು ಮರಣ ಹೊಂದಿದ್ದಲ್ಲಿ ಅಥವಾ ವಸತಿ ಸೌಕರ್ಯ ಪಡೆದ ನಂತರ ಫಲಾನುಭವಿಗಳು ಮರಣ ಹೊಂದಿದ್ದಲ್ಲಿ ಮನೆಯನ್ನು ಸದರಿ ಫಲಾನುಭವಿಗೆ ಸಂಬಂಧಿಸಿದ ನೇರ ವಾರಸುದಾರರ ಹೆಸರಿಗೆ ಈ ಕೆಳಗೆ ತಿಳಿಸಿದಂತೆ ನಿಯಮಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅನುಮೋದನೆ ಪಡೆದು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರು ವಾರಸುದಾರರ ಹೆಸರಿಗೆ ಬದಲಾಯಿಸಿಕೊಡಲು ನಿಗಮದಿಂದ ಅನುಮೋದನೆ ನೀಡಲಾಗಿದೆ.

1. ಗ್ರಾಮ ಪಂಚಾಯತ್ ಕಾರ್ಯದರ್ಶಿಯು, ಮೃತಪಟ್ಟ ಫಲಾನುಭವಿಗಳ ವಾರಸುದಾರರಿಂದ ಮನೆಯನ್ನು ಬದಲಾವಣೆ ಮಾಡಿಕೊಡುವ ಬಗ್ಗೆ ಮೃತ ಫಲಾನುಭವಿಯ ನೇರ ವಾರಸುದಾರರಿಂದ ಮನವಿ ಪತ್ರದೊಂದಿಗೆ ಮರಣ ಪ್ರಮಾಣ ಪತ್ರ, ವಂಶವೃಕ್ಷ ಹಾಗು ಇತರೆ ಅಗತ್ಯ ದಾಖಲೆಗಳನ್ನು ಪಡೆಯುವುದು.
2. ಗ್ರಾಮ ಪಂಚಾಯತ್ ಕಾರ್ಯದರ್ಶಿಯು, ಮೃತಪಟ್ಟ ಫಲಾನುಭವಿಯು ಮೃತರಾಗುವ ಮುನ್ನ ವಿಲ್ ಏನಾದರೂ ಬರೆದಿರುವ ಬಗ್ಗೆ ಪರಿಶೀಲಿಸಿಕೊಳ್ಳುವುದು.
3. ಗ್ರಾಮ ಪಂಚಾಯತ್ ಕಾರ್ಯದರ್ಶಿಯು, ಮನೆಯನ್ನು ಪಡೆದುಕೊಳ್ಳಲಾಗುವ ವಾರಸುದಾರರ ಹೆಸರಿಗೆ ಮನೆಯನ್ನು ವರ್ಗಾಯಿಸಲು ನಮ್ಮ ಯಾವುದೇ ಅಭ್ಯಂತರವಿಲ್ಲದಿರುವುದರ ಬಗ್ಗೆ ಮೃತಪಟ್ಟ ಫಲಾನುಭವಿಯ ಹತ್ತಿರದ ಸಂಬಂಧ ಹೊಂದಿರುವ ಗಂಡ/ಹೆಂಡತಿ/ಮಕ್ಕಳುಗಳ ಅಭಿಪ್ರಾಯವನ್ನು ರೂ. 20/- ಛಾಪಾ ಕಾಗದದಲ್ಲಿ ಪಡೆದುಕೊಳ್ಳುವುದು.
4. ಗ್ರಾಮ ಪಂಚಾಯತ್ ಕಾರ್ಯದರ್ಶಿಯು, ಈ ವಿಷಯವನ್ನು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿಟ್ಟು ಅನುಮೋದನೆ ಪಡೆದುಕೊಂಡು, ಠರಾವಿನೊಂದಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸುವುದು.



ನೊಂದಾಯಿತ ಕಛೇರಿ : 4ನೇ ಮಹಡಿ, ಕೆ.ಹೆಚ್.ಬಿ.ಕಾಂಪ್ಲೆಕ್ಸ್, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು - 560 009
✆ : ಕಛೇರಿ : 91-80-2223 2065, 2223 2067, 2222 7558, 2223 8001 ಫ್ಯಾಕ್ಸ್: 91-80-2223 2066.

5. ನಂತರ ಗ್ರಾಮ ಪಂಚಾಯ್ತಿಯಿಂದ ಬಂದ ಮನವಿಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರು ಕೂಲಂಕುಷವಾಗಿ ಪರಿಶೀಲಿಸಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಅನುಮೋದನೆಗಾಗಿ ಸಲ್ಲಿಸುವುದು.

6. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸದರಿ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಅನುಮೋದನೆ ನೀಡುವುದು.

7. ಈ ರೀತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ಅನುಮೋದನೆ ಪಡೆದ ನಂತರ ಕಾರ್ಯನಿರ್ವಾಹಕಾಧಿಕಾರಿಗಳು ಸಂಬಂಧಪಟ್ಟ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಯವರಿಗೆ ಮೃತ ಫಲಾನುಭವಿಯ ವಾರಸುದಾರರ ಹೆಸರಿಗೆ ಬದಲಾಯಿಸಿಕೊಳ್ಳುವಂತೆ ಆದೇಶ ನೀಡುವುದು.

8. ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು ಮೃತ ಫಲಾನುಭವಿಗೆ ಮನೆ ನಿರ್ಮಾಣದ ಸಂಬಂಧ ಅನುದಾನವನ್ನು ಬಿಡುಗಡೆಗೊಳಿಸಬೇಕಾಗಿದ್ದಲ್ಲಿ ಆ ಅನುದಾನವನ್ನು ಅನುಮೋದನೆ ನೀಡಿದ ವಾರಸುದಾರರ ಹೆಸರಿಗೆ ನೀಡುವುದು. ನೀಡಲಾದ ಅನುದಾನದಲ್ಲಿ ಸಾಲ ಏನಾದರೂ ಇದ್ದಲ್ಲಿ ಸದರಿ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಲು ಸೂಚನೆ ನೀಡುವುದು.

9. ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು, ಮೃತಪಟ್ಟ ಫಲಾನುಭವಿಯು ಈಗಾಗಲೇ ವಸತಿ ಸೌಕರ್ಯ ಪಡೆದಿದ್ದು ಸದರಿ ಮನೆಗೆ ಸಾಲ ತುಂಬಬೇಕಾಗಿದ್ದಲ್ಲಿ ಸದರಿ ಸಾಲವನ್ನು ಬಡ್ಡಿ ಸಮೇತ ವಸತಿ ಸೌಕರ್ಯ ಪಡೆದ ನಂತರ ವರ್ಗಾಯಿಸುವ ದಿನದವರೆಗೆ ಲೆಕ್ಕ ಹಾಕಿ ಸದರಿ ಸಾಲವನ್ನು ಒಂದೇ ಕಂತಿನಲ್ಲಿ ತುಂಬಿಸಿಕೊಂಡ ನಂತರ ಸದರಿ ಮನೆಯನ್ನು ವಾರಸುದಾರರ ಹೆಸರಿಗೆ ವರ್ಗಾಯಿಸುವುದು ಹಾಗೂ ಉಳಿದ ಕಂತುಗಳನ್ನು ತಪ್ಪದೇ ತುಂಬುವ ಬಗ್ಗೆ ಮುಚ್ಚಳಿಕೆ ಪತ್ರವನ್ನು ಪಡೆಯುವುದು, ಒಂದುವೇಳೆ ಸಾಲವನ್ನು ತುಂಬಲು ನಿರಾಕರಿಸಿದ್ದಲ್ಲಿ ವಾರಸುದಾರರಿಗೆ ಮನೆಯನ್ನು ವರ್ಗಾಯಿಸಕೂಡದು. ಈ ನಿಯಮವನ್ನು ಉಲ್ಲಂಘಿಸಿ ಸಾಲ ಮರುಪಾವತಿ ಮಾಡಿಕೊಳ್ಳದೇ ವರ್ಗಾಯಿಸಿದ್ದಲ್ಲಿ ಗ್ರಾಮಪಂಚಾಯಿತಿ ಕಾರ್ಯದರ್ಶಿಯ ನೇರ ಹೊಣೆಗಾರರಾಗುವುದಲ್ಲದೇ ಶಿಸ್ತಿನ ಕ್ರಮಕ್ಕೆ ಒಳಗಾಗುವರು.

10. ಗ್ರಾಮ ಪಂಚಾಯಿತಿ ಕಾರ್ಯದರ್ಶಿಯು, ಫಲಾನುಭವಿಯು ಈಗಾಗಲೇ ವಸತಿ ಸೌಕರ್ಯ ಪಡೆದು ಅವಧಿ 15 ವರ್ಷ ಮೀರಿದ್ದರೂ ಸಾಲವನ್ನು ಮರುಪಾವತಿಸದ ಸಂದರ್ಭದಲ್ಲಿ ಸದರಿ ಮನೆಗೆ ಸಾಲ ತುಂಬಬೇಕಾದ ಸಾಲವನ್ನು ಬಡ್ಡಿ ಸಮೇತ ಒಂದೇ ಕಂತಿನಲ್ಲಿ ತುಂಬಿಸಿಕೊಂಡ ನಂತರ ಸದರಿ ಮನೆಯನ್ನು ವಾರಸುದಾರರ ಹೆಸರಿಗೆ ವರ್ಗಾಯಿಸುವುದು. ಸದರಿ ಸಾಲವನ್ನು ತುಂಬಲು ನಿರಾಕರಿಸಿದ್ದಲ್ಲಿ ವಾರಸುದಾರರಿಗೆ ಮನೆಯನ್ನು ವರ್ಗಾಯಿಸಕೂಡದು. ಈ ನಿಯಮವನ್ನು ಉಲ್ಲಂಘಿಸಿ ಸಾಲ ಮರುಪಾವತಿ ಮಾಡಿಕೊಳ್ಳದೇ ವರ್ಗಾಯಿಸಿದ್ದಲ್ಲಿ ಗ್ರಾಮಪಂಚಾಯಿತಿ ಕಾರ್ಯದರ್ಶಿಯ ನೇರ ಹೊಣೆಗಾರರಾಗುವುದಲ್ಲದೇ ಶಿಸ್ತಿನ ಕ್ರಮಕ್ಕೆ ಒಳಗಾಗುವರು.

ಈ ಮೇಲಿನಂತೆ ಕ್ರಮ ತೆಗೆದುಕೊಂಡು, ಈ ರೀತಿ ವಾರಸುದಾರರಿಗೆ ವರ್ಗಾಯಿಸಿದ ಫಲಾನುಭವಿಗಳ ವಿವರವನ್ನು ಯೋಜನೆ, ಶ್ರೇಣಿ, ಫಲಾನುಭವಿಯ ಹೆಸರು ಲಿಂಗ, ವಾರಸುದಾರರ ಹೆಸರು, ಸಾಲ ಮರುಪಾವತಿ ಬಗ್ಗೆ ವಿವರಗಳನ್ನು ತಪ್ಪದೇ ನಿಗಮಕ್ಕೆ ಮಾಹಿತಿಗಾಗಿ ಸಲ್ಲಿಸುವುದು.

ಡಾ॥ ಹೆಚ್. ವಿ. ಪಾರ್ಶ್ವನಾಥ್
ವ್ಯವಸ್ಥಾಪಕ ನಿರ್ದೇಶಕರು

11/9/08

ಇವರಿಗೆ,

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
2. ರಾಜ್ಯದ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರಿಗೆ ಸಲ್ಲಿಸುತ್ತಾ, ಸದರಿ ಸುತ್ತೋಲೆಯನ್ನು ತಮ್ಮ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯತ್ ಕಾರ್ಯದರ್ಶಿಗಳಿಗೆ ಖುದ್ದಾಗಿ ನೀಡಿ, ಸುತ್ತೋಲೆಯಲ್ಲಿ ತಿಳಿಸಿರುವಂತೆ ಕ್ರಮ ವಹಿಸಲು ತಿಳುವಳಿಕೆ ನೀಡಲು ಸೂಚಿಸಿದೆ.